2

ಚಿಂತನಶೀಲ ಅಭ್ಯಾಸಿಗರು :
ಜೀವನವನ್ನು ಕಲಿಕೆಗೆ ಅರ್ಪಿಸಿಕೊಂಡವರು

"ಬೋಧನೆಯನ್ನು ಕುರಿತಾದ ನನ್ನ ದೃಷ್ಟಿಕೋನವೇ ಈಗ ಬದಲಾಗಿದೆ. ಈಗ ನಾನು ಹಿರಿಯ ಪ್ರಾಥಮಿಕ ತರಗತಿಗಳಂತೆಯೇ ಕಿರಿಯ ಪ್ರಾಥಮಿಕ ತರಗತಿಗಳಿಗೂ ಕಲಿಸುವುದನ್ನು ಇಷ್ಟಪಡುತ್ತೇನೆ. ಬೆಂಗಳೂರು ಸಮೀಪದ ಸೆಂಟರ್ ಫಾರ್ ಲರ್ನಿಂಗ್‌ಗೆ ನಾನು ಕಾರ್ಯಕ್ರಮವೊಂದರ ನಿಮಿತ್ತ ಹೋಗಿದ್ದೆ. ಅಲ್ಲಿ ಪಿಎಚ್.ಡಿ. ಪಡೆದವರೂ ಸಹ ನಾಲ್ಕು ಹಾಗೂ ಐದನೇ ತರಗತಿಗಳಿಗೆ ಪ್ರೀತಿ, ಉತ್ಸಾಹಗಳಿಂದ ಕಲಿಸುವ ನಮೂನೆಯನ್ನು ನೋಡಿ ನನಗೆ ಹೊಸ ಒಂದು ಜಗತ್ತು ತೆರೆದುಕೊಂಡಂತೆ ಆಯಿತು. ಇದರಿಂದ ನನ್ನ ದೃಷ್ಟಿಕೋನವೇ ಬದಲಾಯಿತು. ನಾನೂ ಅದೇ ಉತ್ಸಾಹದಿಂದ ಪ್ರತಿಯೊಂದು ತರಗತಿಗೆ ಕಲಿಸಬೇಕು ಎಂದು ಅಂದೇ ನಿರ್ಧಾರ ಮಾಡಿದೆ." ನನ್ನ ಪ್ರವಾಸದ ಪ್ರಾರಂಭದ ದಿನಗಳಲ್ಲಿ ನಾನು ಈ ಮಾತನ್ನು ಒಬ್ಬರು ಶಿಕ್ಷಕರಿಂದ ಕೇಳಿದೆ. ಆ ಮಾತು ಇಂದಿಗೂ ನನ್ನ ಮನಸ್ಸಿನಲ್ಲಿ ಹಸಿರಾಗಿದೆ. ಕಲಿಸುವ ವಿಷಯವನ್ನು ಕುರಿತಾದ ಜ್ಞಾನವನ್ನೂ ಬೋಧನಾ ವಿಧಾನವನ್ನೂ ಸುಧಾರಿಸಿಕೊಳ್ಳುವುದನ್ನು ಒಬ್ಬ ವೃತ್ತಿನಿಷ್ಠನಾದ ಶಿಕ್ಷಕನಿಂದ ನಿರೀಕ್ಷಿಸುತ್ತೇವೆ. ಆದರೆ ಈ ರೀತಿಯ ವೃತ್ತಿಯನ್ನು ಪ್ರೀತಿಸುವ ಮನೋಧರ್ಮ ಹಾಗೂ ಪ್ರವೃತ್ತಿಯನ್ನು ಕಾಣುವುದು ಅಪರೂಪ; ಅದನ್ನು ಸಾಧಿಸುವುದು ಕಷ್ಟಕರ ಕೂಡಾ. ಈ ಶಿಕ್ಷಕನಿಗೆ ತೆರೆದ ಮನಸ್ಸು ಇತ್ತು, ಹೊಸ ಆಲೋಚನೆಗಳನ್ನೂ ಹೊಸ ಅನುಭವಗಳನ್ನೂ ಪಡೆದುಕೊಳ್ಳುವ ಬಯಕೆ ಇತ್ತು; ಇದರಿಂದ ಆತನಲ್ಲಿ ಬದಲಾವಣೆಯಾಯಿತು. ನನ್ನ ಈ ಯಾತ್ರೆಯಲ್ಲಿ ಮುನ್ನೂರಕ್ಕೂ ಹೆಚ್ಚು ಶಿಕ್ಷಕರನ್ನು ಮಾತನಾಡಿಸಿದ್ದೇನೆ. ಇವರೆಲ್ಲರೂ ಹೆಚ್ಚೂ ಕಡಿಮೆ ಉತ್ತಮ ಶಿಕ್ಷಕರೇ ಆಗಿದ್ದರು. ಇವರಲ್ಲಿ ಹಲವರು ತಮ್ಮನ್ನು ತಾವೇ ಸುಧಾರಿಸಿಕೊಳ್ಳಬೇಕು ಎಂಬ ಮಹದಾಸೆಯಿಂದ ಹೊಸ ಅನುಭವಗಳನ್ನು, ಜ್ಞಾನವನ್ನು ಪಡೆದುಕೊಂಡು ಬದಲಾಗಿರುವುದನ್ನು ಕಂಡಿದ್ದೇನೆ.

ಸಮರ್ಥ ಹಾಗೂ ಚಿಂತನಶೀಲ ಶಿಕ್ಷಕನನ್ನು ವರ್ಣಿಸಲು "ಚಿಂತನಶೀಲ ಅಭ್ಯಾಸಿಗರು" ಎಂದು ಹೇಳುವುದು ಪದೇಪದೇ ಬಳಸುವ ನುಡಿಗಟ್ಟು. ನಾನು ಈ ಸಂಕಲನದಲ್ಲಿ ಹೇಳಿರುವ ಶಿಕ್ಷಕರು ಮೇಲಿನ ನುಡಿಗಟ್ಟಿಗೆ ಜೀವ ತುಂಬುವವರೇ ಸರಿ. ಈ ಶಿಕ್ಷಕರು ಸದಾ ಕಾಲ ತಮ್ಮ ವೃತ್ತಿಯು ಒತ್ತಾಯಿಸುವ ಬೌದ್ಧಿಕ ಮತ್ತು ನೈತಿಕ

ವಿಷಯಗಳ ಬಗ್ಗೆ ಅರ್ಥಪೂರ್ಣವಾಗಿ ಚಿಂತಿಸುತ್ತ ಇರುತ್ತಾರೆ. ಅದನ್ನು ಅವರು ಮಕ್ಕಳು ಹೇಗೆ ಯೋಚಿಸುತ್ತಾರೆ, ಅವರ ಅನಿಸಿಕೆಗಳೇನು ಮತ್ತು ಅವರು ಹೇಗೆ ಕಲಿಯುತ್ತಾರೆ ಎಂಬುದರೊಂದಿಗೆ ತಾಳೆ ಹಾಕಿ ನೋಡುತ್ತಾರೆ. ನಾನು ಭೇಟಿ ಮಾಡಿದ ಇಂತಹ ಚಿಂತನಶೀಲ ಶಿಕ್ಷಕರು ಅನೇಕ ಮಂದಿ. ಅವರಲ್ಲಿ ಬೆರಳೆಣಿಕೆಯಷ್ಟು ಮಂದಿಯನ್ನು ಮಾತ್ರ ಈ ಕೃತಿಗೆ ಆಯ್ಕೆ ಮಾಡಲು ಬಹಳ ಕಷ್ಟಪಡಬೇಕಾಯಿತು.

ಒಬ್ಬರು ಶಿಕ್ಷಕಿ ಪಾಠ ಮಾಡುವುದನ್ನು ವೀಕ್ಷಿಸಿ ನಾನು ಅವರನ್ನು ಪ್ರಶಂಸೆ ಮಾಡಿದಾಗ ಅವರು ಬಲು ವಿನಮ್ರತೆಯಿಂದ ಹೀಗೆ ಹೇಳಿದರು: "ನೀವು ನನ್ನ ಪಾಠವನ್ನು ಹತ್ತು ವರ್ಷಗಳ ಹಿಂದೆ ನೋಡಬೇಕಿತ್ತು. ನಾನು ಪಠ್ಯಕ್ರಮವನ್ನು ಯಾಂತ್ರಿಕವಾಗಿ ಮುಗಿಸುತ್ತಿದ್ದೆ. ನಾನೂ ಸಾಂಪ್ರದಾಯಿಕ ಶಿಕ್ಷಕಿಯಾಗಿದ್ದೆ." ತಾವು ನೋಡಿ, ತಿಳಿದು, ಕಲಿತು ಹೆಚ್ಚು ಸಮರ್ಥ ಶಿಕ್ಷಕರಾದೆವು ಎಂದು ಶಿಕ್ಷಕರು ಸಾಲು ಸಾಲಾಗಿ ನನ್ನೊಡನೆ ಹೇಳಿದ್ದಾರೆ. ತರಬೇತಿ ಕಾರ್ಯಕ್ರಮಗಳಿಂದಲೂ ಕಾರ್ಯಾಗಾರಗಳಿಂದಲೂ ಪ್ರಯೋಜನ ಪಡೆದುದಾಗಿ ಹೇಳಿದರು. ಅಲ್ಲಿ ಕಲಿತುದನ್ನು ತರಗತಿಯಲ್ಲಿ ಪ್ರಯೋಗ ಮಾಡಿದ್ದು, ಪ್ರಾಜೆಕ್ಟ್‌ಗಳನ್ನು ನಡೆಸಿದ್ದು ಇತ್ಯಾದಿ ವಿವರಿಸಿದರು. ಮಕ್ಕಳಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸುವ ಗ್ರಂಥಾಲಯದ ಸ್ಥಾಪನೆಯು ಭಾಷಾ ಕಲಿಕೆ ವೃದ್ಧಿ ಕುರಿತಾದ ಕಾರ್ಯಾಗಾರಗಳಲ್ಲಿ ತಿಳಿದು ಜ್ಞಾನ ಪಡೆದುದರ ಪರಿಣಾಮವೆಂದು ಅನೇಕರು ಹೇಳಿದರು. ಅನೇಕ ಬಾರಿ ಇಂತಹ ಕಾರ್ಯಕ್ರಮಗಳಲ್ಲಿ ಲೋಕಾಭಿರಾಮ ವಿಷಯಗಳ ಭರ್ಜರಿ ಚರ್ಚೆ ನಡೆಯುವುದುಂಟು. ಕಾರ್ಯಾಗಾರವೊಂದು ನಿಜವಾಗಿಯೂ ಅರ್ಥಪೂರ್ಣವಾಗಿದ್ದರೆ ಶಿಕ್ಷಕನಿಗೆ ಅದು ನೆನಪಿನಲ್ಲಿ ಉಳಿಯುತ್ತದೆ. ಆದ್ದರಿಂದಲೇ ನಾವು ಶಿಕ್ಷಕರಲ್ಲಿ ಅವರು ಭಾಗವಹಿಸಿದ ತರಬೇತಿ ಶಿಬಿರ ಹಾಗೂ ಕಾರ್ಯಾಗಾರಗಳ ಬಗ್ಗೆ ಹೆಚ್ಚು ವಿವರವಾಗಿ, ಅವುಗಳ ಹೆಸರು, ಏನು ಚರ್ಚೆ ನಡೆಯಿತು ಹಾಗೂ ಅವು ಹೇಗೆ ಪ್ರಯೋಜನಕಾರಿಗಳಾದವು ಎಂದು ವಿವರಿಸುವಂತೆ ಒಡಂಬಡಿಸುತ್ತೇವೆ. ಅನೇಕ ಶಿಕ್ಷಕರು ಕಾರ್ಯಾಗಾರದ ಹೆಸರನ್ನು ನೆನಪಿಟ್ಟುಕೊಳ್ಳುತ್ತಾರೆ, ಹಲವರು ಅಲ್ಲಿ ಮಾರ್ಗದರ್ಶಕರೂ ಸಂಪನ್ಮೂಲ ವ್ಯಕ್ತಿಗಳೂ ಆಗಿದ್ದವರನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಾರೆ. ಕಾರ್ಯಾಗಾರದ ಪ್ರಭಾವದಿಂದ ತಾವು ಅಭಿವೃದ್ಧಿಪಡಿಸಿದ ಪರಿಕರಗಳನ್ನೂ ಸಿದ್ಧಪಡಿಸಿದ ಕಲಿಕೆಯ ಅಭ್ಯಾಸಗಳನ್ನೂ ಅವರು ನಮಗೆ ತೋರಿಸಿದರು. ಅಧ್ಯಾಪನದಲ್ಲಿ ವಿಷಯ ಜ್ಞಾನವನ್ನೂ ಬೋಧನಾ ಕ್ರಮವನ್ನೂ ಸುಧಾರಿಸಿಕೊಂಡ ಬಗೆಯನ್ನು ವಿವರಿಸಿದರು. ನಕಾಶೆಗಳನ್ನು ಉಪಯೋಗಿಸುವ ಮೂಲಕ ಸಮಾಜ ವಿಜ್ಞಾನದ ಕಲಿಕೆಯನ್ನು ಹೇಗೆ ಹೆಚ್ಚು ರೋಚಕವಾಗಿ ಮಾಡಬಹುದು, ಅಥವಾ ವಿಜ್ಞಾನದ ತತ್ವವೊಂದನ್ನು ತಿಳಿಸಲು ತಾವೇ ಮನೆಯಲ್ಲಿ ತಯಾರಿಸಿದ ಪ್ರಯೋಗ ಹೇಗೆ ಸಹಕಾರಿಯಾಯಿತು ಎಂದು ಉದಾಹರಣೆಗಳನ್ನೂ ನೀಡಿದರು. 'ಶಿಕ್ಷಕರ ಸಾಮರ್ಥ್ಯ ವೃದ್ಧಿಯಲ್ಲಿ ವಿಜ್ಞಾನ ಹಾಗೂ ಗಣಿತದ ಕಾರ್ಯಾಗಾರಗಳು ಅತ್ಯಂತ ಹೆಚ್ಚು ಪ್ರಯೋಜನಕಾರಿ. ನಾವು ಈಗ ಬಳಸುತ್ತಿರುವ ನಕಾಶೆಗಳೂ ಪರಿಕರಗಳೂ ಈ ಕಾರ್ಯಾಗಾರಗಳ ಫಲಿತಾಂಶವಾಗಿವೆ' ಎಂದು ಒಬ್ಬರು ಶಿಕ್ಷಕಿ ಹೇಳಿದರು. ಈ ಶಿಕ್ಷಕರೆಲ್ಲ ಯಾವ ಕಾರ್ಯಾಗಾರ ಕಬ್ಬಿಣದ

ಕಡಲೆಯಾಯಿತು, ಯಾವುದು ಜೊಳ್ಳು ಎನಿಸಿತು ಎಂಬುದನ್ನು ಕೂಡಾ ಹಿಂದೆ–ಮುಂದೆ ನೋಡದೆ ಹೇಳಿದ್ದರಿಂದಲೇ ಅವರ ಅಭಿಪ್ರಾಯಕ್ಕೆ ತೂಕ ಬಂತು.

ತಮ್ಮ ವೇಳಾಪಟ್ಟಿ, ಬೋಧನಾ ವಿಧಾನ, ಮೌಲ್ಯಮಾಪನ ವಿಧಾನಗಳು ಮತ್ತು ಶಾಲಾ ಚಟುವಟಿಕೆಗಳ ಒಟ್ಟಾರೆ ನಿರ್ವಹಣೆ ಇವುಗಳನ್ನು ಸ್ವಾಯತ್ತವಾಗಿಯೇ ಮಾಡಲು ಕಲಿತದ್ದು, ಅವರ ವೃತ್ತಿಪರಿಣತಿಯ ಅಭಿವೃದ್ಧಿಯ ಯಾತ್ರೆಯಲ್ಲಿನ ಒಂದು ಮೈಲುಗಲ್ಲಾಗಿದೆ. ಅವರಲ್ಲಿ ಒಬ್ಬ ಶಿಕ್ಷಕರು ನಮಗೆ ಹೀಗೆ ಹೇಳಿದರು, "ನಾನು ಕಾರ್ಯಾಗಾರದಿಂದ ಹೊರ ಬಂದಾಗ ಮುಕ್ತಮನಸ್ಕನಾಗಿದ್ದೆ. ನಾನು ಪಠ್ಯಪುಸ್ತಕಗಳ ಅಥವಾ ಪಠ್ಯಕ್ರಮದ ಗುಲಾಮನಲ್ಲ: ಬದಲಾಗಿ ಅವುಗಳ ಒಡೆಯ ಎಂದು ನನಗೆ ಮೊದಲ ಬಾರಿಗೆ ಅರಿವಾಯಿತು. ಎಲ್ಲಕ್ಕಿಂತ ಮುಖ್ಯವಾಗಿ ಒಳ್ಳೆಯ ಶಿಕ್ಷಕನಾಗಬೇಕು ಎಂಬ ಹುಡುಕಾಟದಲ್ಲಿ ಶಿಕ್ಷಣದ ಉದ್ದೇಶವೇನು ಹಾಗೂ ಪಠ್ಯಕ್ರಮದ ಪಾತ್ರವೇನು ಎಂಬುದರ ಬಗ್ಗೆ ಹೆಚ್ಚು ನಿಖರವಾದ ತಿಳಿವಳಿಕೆ ಉಂಟಾದುದಲ್ಲದೆ ಎಲ್ಲ ಮಕ್ಕಳಿಗೂ ನ್ಯಾಯ ಒದಗಿಸಬೇಕು, ಸಾಮಾಜಿಕ ನ್ಯಾಯದ ಪರಿಪಾಲನೆ ಆಗಬೇಕು ಮತ್ತು ಶಿಕ್ಷಣದಿಂದ ಸಮಾಜದ ಗುಣಮಟ್ಟ ಸಮಗ್ರವಾಗಿ ಮೇಲಕ್ಕೇರಬೇಕು ಎಂಬ ತಮ್ಮ ನಂಬಿಕೆಗೆ ಹೆಚ್ಚಿನ ಹೊಳಪು ಹಾಗೂ ಅರ್ಥ ಸ್ಫುಟವಾಯಿತು ಎಂದು ಈ ಶಿಕ್ಷಕರು ಅಭಿಪ್ರಾಯಪಟ್ಟರು. ಪ್ರತಿಯೊಂದು ಮಗುವಿನಲ್ಲಿಯೂ ಕಲಿಯುವ ಸಾಮರ್ಥ್ಯವಿದೆ ಹಾಗೂ ತರಗತಿಯೊಳಗೆ ಎಲ್ಲ ವರ್ಗದ ಮಕ್ಕಳನ್ನು ಸಮಾನ ನೆಲೆಯಲ್ಲಿ ನಡೆಸಿಕೊಳ್ಳುವುದು ಯಾವುದೇ ಶಾಲೆಯ ಸಂಸ್ಕೃತಿಯನ್ನೂ ಅದು ನಂಬಿದ ಮೌಲ್ಯಗಳನ್ನೂ ತೋರಿಸುತ್ತದೆ ಎಂಬ ನಂಬಿಕೆಯನ್ನು ಶಿಕ್ಷಕರಲ್ಲಿ ಗಟ್ಟಿಗೊಳಿಸುವುದೇ ಈ ಕಾರ್ಯಾಗಾರಗಳು ನೀಡುವಂತಹ ಮಹತ್ವದ ಕೊಡುಗೆಯಾಗಿದೆ. ನಮ್ಮ ದೇಶದಲ್ಲಿ ಸಾಮಾನ್ಯವಾಗಿ ತುಂಬಾ ಪಾಂಡಿತ್ಯ ಹೊಂದಿದವರೂ ದೊಡ್ಡ ಶೈಕ್ಷಣಿಕ ಸಾಧನೆಗಳನ್ನು ಮಾಡಿದವರೂ ಶಿಕ್ಷಕ ವೃತ್ತಿ ಮಾಡಲು ಬಯಸದೇ ಇರುವುದು ವಿಷಾದನೀಯ. ಸಾಮಾನ್ಯ ಮಟ್ಟದ ಶೈಕ್ಷಣಿಕ ಸಾಧನೆಯುಳ್ಳವರು ಶಾಲಾ ಶಿಕ್ಷಕರಾಗುತ್ತಾರೆ; ಅದೂ ಕೂಡಾ ಅವರ ಮೊದಲ ಆಯ್ಕೆ ಅಲ್ಲದಿರುವುದೇ ಹೆಚ್ಚು. ಹೀಗಾಗಿ ಈ ಸಾಮಾನ್ಯ ಮಟ್ಟದ ವಿದ್ಯಾವಂತರು ಶಿಕ್ಷಕರಾದ ಮೇಲೆ ತಮ್ಮ ವೃತ್ತಿ ನೈಪುಣ್ಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ ನಡೆಸುವ ಪ್ರಯತ್ನ, ಹೂಡುವ ಶ್ರಮ ನಿಜಕ್ಕೂ ಅದ್ಭುತವಾದದ್ದು. ಇವರ ಪರಿಣತಿ, ನೈಪುಣ್ಯಗಳನ್ನು ಇನ್ನಷ್ಟು ಬೆಳೆಸಲು ನಮ್ಮ ಶಿಕ್ಷಣ ಪದ್ಧತಿ ವಿಫಲವಾಗಿದೆ; ಅದಕ್ಕೆ ಅದರ ವಿಶಾಲ ಗಾತ್ರವೂ ಒಳಗಿನ ಸಂಕ್ಲಿಷ್ಟ ಸ್ವರೂಪವೂ ಕಾರಣ. ಗ್ರಾಮೀಣ ಶಿಕ್ಷಕರ ಪಾಡನ್ನು ಕೇಳುವವರು ಯಾರೂ ಇಲ್ಲ. ಅನೇಕರಿಗೆ ಇದನ್ನು ಎದುರಿಸುವುದು ಅಸಾಧ್ಯವಾಗುತ್ತದೆ; ಸ್ವಲ್ಪ ಹೆಚ್ಚು ಧೈರ್ಯ, ಸ್ಥೈರ್ಯ ಉಳ್ಳವರು ಉಳಿದುಕೊಳ್ಳುತ್ತಾರೆ. ಅವರು ತಮ್ಮ ನೈಪುಣ್ಯವನ್ನು ಹೆಚ್ಚಿಸಿಕೊಳ್ಳಲು ಔಪಚಾರಿಕ ವ್ಯವಸ್ಥೆಗಳಲ್ಲೂ ಅನೌಪಚಾರಿಕವಾದ ಸ್ವಯಂಪ್ರೇರಿತ ಗುಂಪುಗಳ ಮೂಲಕವೂ ಪ್ರಯತ್ನ ಪಡುತ್ತಾರೆ. ಶೈಕ್ಷಣಿಕ ವಿಷಯಗಳನ್ನೂ ಬೋಧನಾವಿಧಾನಕ್ಕೆ ಸಂಬಂಧಿಸಿದ ವಿಚಾರಗಳನ್ನೂ ಮಂಡಿಸಿ ಚರ್ಚಿಸಲು ಶಿಕ್ಷಕರ ಸ್ವಯಂಪ್ರೇರಿತ ವೇದಿಕೆಗಳ ರಚನೆ ಆಗಿದೆ. ಶಿಕ್ಷಕರು ತಮ್ಮ ರಜೆಗಳನ್ನು ಸ್ವಂತ ಇಚ್ಛೆಯಿಂದಲೇ ತ್ಯಾಗ

ಮಾಡಿ ಬೇಸಿಗೆ, ಚಳಿಗಾಲಗಳ ಸ–ನಿವಾಸ ತರಬೇತಿ, ಕಾರ್ಯಾಗಾರಗಳಿಗೆ ಹಾಜರಾಗುತ್ತಿದ್ದಾರೆ. ಸ್ವಯಂಪ್ರೇರಿತ ಶಿಬಿರಗಳಲ್ಲಿ ಹಾಗೂ ಶಿಕ್ಷಕರ ಕಲಿಕಾ ಕೇಂದ್ರ (ಟಿಎಲ್‌ಸಿ)ಗಳಲ್ಲಿ (ಇವುಗಳಿಗೆ ಕೆಲವು ಜಿಲ್ಲೆಗಳಲ್ಲಿ ಕಲಿಕಾ ಸಂಪನ್ಮೂಲ ಕೇಂದ್ರಗಳೆಂದೂ ಹೆಸರಿದೆ) ತಾವು ಪಡೆದ ಅನುಭವಗಳನ್ನು ಸಂತೋಷದಿಂದ ಸ್ಮರಿಸಿಕೊಂಡು ಈ ಕಲಿಕೆ ಅತ್ಯಂತ ಮೌಲ್ಯಯುತವಾದುದೆಂದು ಹೇಳುತ್ತಾರೆ. ಶಿಕ್ಷಕರು ತಮ್ಮ ಶಾಲಾ ತರಗತಿಗಳು ಮುಗಿದ ಮೇಲೆಯೂ ಇವುಗಳಲ್ಲಿ ಭಾಗವಹಿಸುತ್ತಾರೆ. ವೃತ್ತಿಪರವಾಗಿ ತಾವು ಬೆಳೆಯಬೇಕು ಎಂಬ ಶಿಕ್ಷಕರ ಬಯಕೆ ಈಚೆಗೆ ಎಲ್ಲಾ ವಯೋಮಾನದವರಲ್ಲೂ ಕಂಡುಬರುತ್ತಿದೆ. ಇಂಥ ಅನುಭವಗಳ ಪರಿಣಾಮವಾಗಿಯೇ ಶಿಕ್ಷಕರು ತಮ್ಮ ತರಗತಿಯ ಪಾಠದ ಸಫಲತೆ ಅಥವಾ ವೈಫಲ್ಯ–ಕೊರತೆಗಳ ಬಗ್ಗೆ ದಿನವೂ ಚಿಂತನೆ ನಡೆಸಿ ಬರೆದಿಡುವ ಹವ್ಯಾಸವನ್ನು ಬೆಳೆಸಿಕೊಂಡಿದ್ದಾರೆ. ಈಗ್ಗೆ ಹದಿನೈದು ವರ್ಷಗಳ ಹಿಂದೆ ಶಿಕ್ಷಕರಿಗೆ ದಿನಚರಿ ಬರೆಯುವ ಹವ್ಯಾಸವೇ ಇರಲಿಲ್ಲ; ಬೇರೆ ವಾಚನಗಳೂ ಕಡಿಮೆಯಿದ್ದವು, ಈಗಲಾದರೋ ಸ್ಥಿತಿ ಬದಲಾಗಿದೆ; ಹೆಚ್ಚು ಹೆಚ್ಚು ಶಿಕ್ಷಕರು ಈ ಅಭ್ಯಾಸವನ್ನು ರೂಢಿಸಿಕೊಂಡಿದ್ದಾರೆ.

ಬೇರೆ ರೀತಿಯ ಬದಲಾವಣೆಯ ಗಾಳಿಯೂ ಬೀಸುತ್ತಿದೆ. ರಾಜಸ್ಥಾನದಲ್ಲಿ ಊಳಿಗಮಾನ್ಯ ಪದ್ಧತಿ ಪ್ರಬಲವಾಗಿರುವ ಜಿಲ್ಲೆಗಳಲ್ಲಿ ಸ–ನಿವಾಸ ತರಬೇತಿ ಕಾರ್ಯಕ್ರಮಗಳಿಗೆ ಹಾಜರಾಗುವ ಶಿಕ್ಷಕಿಯರ ಸಂಖ್ಯೆ ನಿಧಾನವಾಗಿ ಹೆಚ್ಚುತ್ತಿದೆ. ಇದು ತಮ್ಮ ಶ್ರೇಯಸ್ಸಿನ ಕುರಿತಾಗಿ ಶಿಕ್ಷಕಿಯರಿಗೆ ಇರುವ ಬದ್ಧತೆಯಂತೆಯೇ ಕುಟುಂಬಗಳಲ್ಲಿನ ಲಿಂಗ ತಾರತಮ್ಯ ಮನೋಭಾವದಲ್ಲಿನ ಬದಲಾವಣೆಯನ್ನೂ ತೋರಿಸುತ್ತದೆ. 12ನೇ ತರಗತಿ ಮುಗಿಸಿ ಇಲಾಖೆಯನ್ನು ಸೇರಿದ ಕೆಲವು ಹಿರಿಯ ಶಿಕ್ಷಕರು ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಸಹ ಸೇವೆಯಲ್ಲಿದ್ದೇ ಪಡೆದುಕೊಂಡಿದ್ದಾರೆ. ತಂತ್ರಜ್ಞಾನದ ಅಭಿರುಚಿಯಿರುವ ಕಿರಿಯ ಶಿಕ್ಷಕರು ಕಲಿಕಾ ಕೇಂದ್ರಗಳಲ್ಲಿರುವ ಕಂಪ್ಯೂಟರ್‌ಗಳನ್ನು ಬಳಸಿ ತರಗತಿಗಳಿಗೆ ಉಪಯುಕ್ತವಾಗುವ ವಿಷಯಗಳನ್ನು ಸಂಗ್ರಹಿಸುತ್ತಾರೆ. ಕೆಲವರು ವೈಯಕ್ತಿಕ ಬಳಕೆಗಾಗಿ ಲ್ಯಾಪ್‌ಟಾಪ್‌ಗಳನ್ನು ಕೊಂಡಿದ್ದಾರೆ ಕೂಡಾ.

ಇತ್ತೀಚಿನ ವರ್ಷಗಳಲ್ಲಿ ಶಿಕ್ಷಕರಿಗೆ ವ್ಯಾಟ್ಸ್‌ಆ್ಯಪ್ ಗುಂಪುಗಳು ಶೈಕ್ಷಣಿಕ ಬೆಂಬಲದ ಪ್ರಮುಖ ಮೂಲಗಳಾಗಿವೆ. ಸ್ವಯಂಪ್ರೇರಿತ ಶಿಕ್ಷಕ ಕೇಂದ್ರಗಳಿಗೆ ಸುಮಾರು ಶೇಕಡ 15–20ರಷ್ಟು ಶಿಕ್ಷಕರು ಮಾತ್ರ ನಿಯಮಿತವಾಗಿ ಹೋಗುತ್ತಾರೆ. ಆದರೆ ಸ್ಥಳೀಯ ಬ್ಲಾಕ್ ಅಥವಾ ಜಿಲ್ಲಾ ವ್ಯಾಟ್ಸ್‌ಆ್ಯಪ್ ಗುಂಪುಗಳಲ್ಲಿ ಬಹು ಸಂಖ್ಯೆಯಲ್ಲಿ ಸದಸ್ಯರಾಗಿ ಇದ್ದಾರೆ. ಈ ಗುಂಪುಗಳಲ್ಲಿ ವಿಷಯಾಧಾರಿತ ಗುಂಪುಗಳೂ ಇದ್ದು ಸದಸ್ಯರು ತಮ್ಮ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಾರೆ. ಈ ಒಲವು ಇನ್ನೂ ದೊಡ್ಡದಾಗಿ ಬೆಳೆದಿಲ್ಲ. ಸಂಕೋಚ ಸ್ವಭಾವದ ಅಥವಾ ಆತ್ಮವಿಶ್ವಾಸ ಕಡಿಮೆ ಇರುವ ಶಿಕ್ಷಕರಿಗೆ ಈ ವೇದಿಕೆಯಿಂದ ಸಹಾಯವಾಗಿದೆ. ವಿಷಯದಲ್ಲಿ ಪರಿಣತಿ ಹೊಂದಿರುವವರು ಈ ಚರ್ಚೆಗಳಲ್ಲಿ ತೊಡಗುವುದರಿಂದ ಈ ವೇದಿಕೆ ಅತ್ಯಂತ ಪ್ರಸ್ತುತವೂ ಉಪಯುಕ್ತವೂ ಆಗಿದೆ. ಇಂಗ್ಲಿಷ್ ಭಾಷೆಗೆ ಸಂಬಂಧಿಸಿದಂತೆ ಎಲ್ಲ ಶಿಕ್ಷಕರಿಗೂ ಸಮಸ್ಯೆ ಇರುತ್ತದೆ. ಅವರು ಇದಕ್ಕೆ ಅಂತರ್ಜಾಲದಿಂದಲೂ ಸ್ಮಾರ್ಟ್‌ಫೋನ್ ಮೂಲಕವೂ ಪರಿಹಾರ ಕಂಡುಕೊಳ್ಳಬಹುದೆಂದು ಆಶಿಸುತ್ತಾರೆ.